## ಕರ್ನಾಟಕದಲ್ಲಿ ಮಿಸಾ ಹಾಗೂ ಡಿ.ಐ.ಆರ್. ಅನ್ವಯ ಬಂಧನಕ್ಕೊಳಗಾದವರಿಗೆ ವಿಶ್ರಾಂತಿ ವೇತನ ಮಂಜೂರಾತಿ

೧೩೮ (೧೫೮) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ:—

ಅ) ೧೯೭೫–೭೭ರ ಅವಧಿಯ ತುರ್ತು ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ''ಮಿಸಾ ಮತ್ತು ಡಿಐಆರ್'' ಮೇರೆಗೆ ಶಿಕ್ಷೆಗೊಳಗಾದವರ ಸಂಖ್ಯೆ ಎಷ್ಟು?

ಆ) ಈ ಅವಧಿಯಲ್ಲಿ ನೂರಾರು ಕುಟುಂಬಗಳು ತೀವ್ರ ತೊಂದರೆಗೊಳಗಾಗಿದ್ದು ಸರ್ಕಾರವು ಈ ರೀತಿ ತೊಂದರೆಗೊಳಗಾದವರಿಗೆ ಮಾಶಾಸನ–ವಿಶ್ರಾಂತಿ ವೇತನ ನೀಡುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಮಿಸಾ ಕಾನೂನು ಮೇರೆಗೆ ನಜರ ಬಂದಿಯಲ್ಲಿ ಇಡಲಾಗಿದ್ದವರ ಸಂಖ್ಯೆ ೪೭೩, ಡಿಐಆರ್ ಮೇರೆಗೆ ಬಂಧಿತರಾಗಿದ್ದವರ ಸಂಖ್ಯೆ ೪೦೫.

ಆ) ವಿಶ್ರಾಂತಿ ವೇತನ ಕೊಡುವ ಯೋಚನೆ ಮಾಡಿಲ್ಲ.

ಶ್ರೀ ಎಂ. ಆನಂದರಾವ್.—ಮಾನ್ಯ ಅಧ್ಯಕ್ಷರೇ, ಈಗ ಮುಖ್ಯಮಂತ್ರಿಗಳಾಗಿರತಕ್ಕ ಶ್ರೀ ರಾಮಕೃಷ್ಣ ಹೆಗಡೆಯವರೂ ಸೇರಿ ಸುಮಾರು ೫–೬ ಜನ ಮಂತ್ರಿಮಂಡಲದ ಸದಸ್ಯರು ಹಾಗೂ ಈ ಭಾಗದ ಸುಮಾರು ೨೦–೨೫ ಜನ ಸದಸ್ಯರುಗಳು ಕೂಡಾ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ''ಮಿಸಾ'' ಮತ್ತು ''ಡಿಐಆರ್'' ಕೆಳಗೆ ಬಂಧಿತರಾಗಿದ್ದರು. ಹೀಗೆ ಬಂಧಿತರಾದಂತಹವರ ಅನೇಕ ಜನರ ಸಂಸಾರಗಳು ಆರ್ಥಿಕ ನಷ್ಟಕ್ಕೆ ಒಳಗಾಗಿವೆ. ಹಾಗೂ ಮಹಾರಾಷ್ಟ್ರ, ರಾಜಸ್ಥಾನ್, ಪಂಜಾಬ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಈ ಕಾನೂನು ಕೆಳಗೆ ಬಂಧಿತರಾದವರಿಗೆ ವಿಶ್ರಾಂತಿ ವೇತನವನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದಾರೆಂದು ತಿಳಿದುಬಂದಿದೆ. ಈ ರೀತಿ ವಿಶ್ರಾಂತಿ ವೇತನ ಕೊಡಲು ನಮ್ಮ ಸರ್ಕಾರ ಕೂಡಾ ಪ್ರಯತ್ನ ಮಾಡುತ್ತದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕೆಲವು ರಾಜ್ಯಗಳಲ್ಲಿ ವಿಶ್ರಾಂತಿ ವೇತನ ಕೊಡತಕ್ಕ ವ್ಯವಸ್ಥೆ ಮಾಡಿದ್ದಾರೆಂದು ನಾನು ಕೇಳಿದ್ದೆ. ಆದರೆ ಅದು ನನಗೆ ಅಧಿಕೃತವಾಗಿ ಗೊತ್ತಾಗಿಲ್ಲ. ಆ ಬಗ್ಗೆ ನಾನು ಅಧಿಕೃತ ಮಾಹಿತಿಯನ್ನು ತರಿಸುತ್ತೇನೆ. ಸುಮಾರು ೪ ಸಾವಿರ ಜನ ಈ ಕಾನೂನು ಕೆಳಗೆ ಬಂಧಿತರಾಗಿದ್ದು ಕೆಲವರು ಶಿಕ್ಷೆಗೂ ಸಹಾ ಒಳಗಾಗಿದ್ದಾರೆ. ಇವರೆಲ್ಲರಿಗೂ ವಿಶ್ರಾಂತಿ ವೇತನ ಕೊಟ್ಟ ಪಕ್ಷದಲ್ಲಿ ಎಷ್ಟು ಖರ್ಚು ಬರುತ್ತದೆಂಬುದನ್ನು ನೋಡಬೇಕಾಗುತ್ತದೆ. ಹಾಗೂ ಇವರೆಲ್ಲರೂ ಕೂಡಾ ಅಂತಹ ಆರ್ಥಿಕ ಕಷ್ಟದಲ್ಲಿ ಇರಬೇಕಾಗಿಲ್ಲ. ಇವರುಗಳು ಸತ್ಯಾಗ್ರಹ ಮಾಡಿದಾಗ ಮತ್ತು ಬಂಧನಕ್ಕೆ ಒಳಗಾದಾಗ ಅವರೇನೂ ಇಂತಹ ಪ್ರತಿಫಲ ಸಿಗುತ್ತದೆಂದು ನಿರೀಕ್ಷೆ ಮಾಡಿರಲಿಲ್ಲ. ಪ್ರಜಾಪ್ರಭುತ್ವದ ಉಳಿವಿಗಾಗಿ, ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಈ ತ್ಯಾಗವನ್ನು ಅವರು ಮಾಡಿದ್ದಾರೆ. ಮಾನ್ಯ ಸದಸ್ಯರ ಭಾವನೆಗೆ ನಾನೂ ಕೂಡಾ ಪುಷ್ಟಿ ಕೊಡುತ್ತೇನೆ. ಆದರಲ್ಲಿ ಸಂದೇಹವಿಲ್ಲ. ಆದರೆ ಈ ಬಗ್ಗೆ ಅಷ್ಟು ಸುಲಭವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

## ಉತ್ತರ ಕರ್ನಾಟಕದಲ್ಲಿ "ಬಿ" ಹಾಗೂ "ಡಿ" ಫಾರ್ಮಾ ಕಾಲೇಜುಗಳ ಸ್ಥಾಪನೆ

೧೩೯ (೨೨೨) ಶ್ರೀ ಎಂ. ಬಿ. ಜಿರತಾರಗರ್ (ಹುಬ್ಬಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ:—

ಅ) ರಾಜ್ಯದಲ್ಲಿ ''ಬಿ'' ಫಾರ್ಮ ಹಾಗೂ ''ಡಿ'' ಫಾರ್ಮ ಸರ್ಕಾರಿ ಕಾಲೇಜುಗಳೆಷ್ಟು ಹಾಗೂ ಅವು ಯಾವ ಸ್ಥಳಗಳಲ್ಲಿರುವುವು.

ಆ) ಮೇಲ್ಕಂಡ ಕಾಲೇಜುಗಳಲ್ಲಿ ಸರ್ಕಾರದಿಂದ ನಡೆಸುವವು ಎಷ್ಟು ಹಾಗೂ ಖಾಸಗಿ ಎಷ್ಟು?